# ಅಪ್ಪನ ಹೊಲಿಗೆ ಕಾಯಕ

**ಮ**ನೆಯ ಬೀಗದ ಕೈಯನ್ನು ಬಲಗೈನಲ್ಲಿ ಬಿಗಿಯಾಗಿ ಹಿಡಿದುಕೊಂಡೇ ಸರ್ಕಾರಿ ಆಸ್ಪತ್ರೆಯ ಕಡೆ ಅಳುತ್ತಾ ಓಡತೊಡಗಿದೆ. ನನ್ನ ಬೆನ್ನಿನ ಮೇಲಿದ್ದ ಬ್ಯಾಗು ಅತ್ತಿತ್ತ ತೂಗಾಡುತಿತ್ತು. ಕಾಲಿನಲ್ಲಿದ್ದ ಹವಾಯಿ ಚಪ್ಪಲಿಗಳು ಲಟಪಟ ಎಂದು ಸದ್ದು ಮಾಡುತಿದ್ದವು. ಅಡ್ಡ ಬರುತ್ತಿದ್ದ ವಾಹನಗಳನ್ನೂ ಜನರನ್ನೂ ತಪ್ಪಿಸಿ ನಾನು ಓಡುತಿದ್ದೆ. ರಸ್ತೆಯಲ್ಲಿ ಓಡಾಡುತಿದ್ದ ಜನರೆಲ್ಲಾ ನನ್ನ ಕಡೆಗೆ ತಿರುಗಿ ನೋಡುತ್ತಿದ್ದರು. ನನಗೆ ಇದಾವುದರ ಬಗೆಗೂ ಲಕ್ಷ್ಯವಿರಲಿಲ್ಲ. ಆಸ್ಪತ್ರೆ ತಲುಪಿದಾಗ ಅಲ್ಲಿ ನಮ್ಮ ಕಡೆಯವರು ಯಾರೂ ಇರಲಿಲ್ಲ. ನಾನು ಒಂದೊಂದೇ ವಾರ್ಡ್‌ಗಳನ್ನು ಹುಡುಕಿಕೊಂಡು ಪುರುಷರ ವಾರ್ಡ್‌ಗೆ ಬಂದೆ. ಅಲ್ಲಿ ಒಂದು ಹಾಸಿಗೆಯ ಬಳಿ ಅಮ್ಮ ಅಳುತ್ತಾ ನಿಂತಿದ್ದಳು. ವೈದ್ಯರು ಹಾಸಿಗೆಯ ಮೇಲೆ ಮಲಗಿದ್ದ ಅಪ್ಪನನ್ನು ಪರೀಕ್ಷಿಸುತ್ತಿದ್ದರು. ದಾದಿಯರು ಮತ್ತು ಆಸ್ಪತ್ರೆಗೆ ಬಂದಿದ್ದ ಒಂದಷ್ಟು ಜನರು ಸುತ್ತಲೂ ನಿಂತಿದ್ದರು. ನಾನು ಓಡಿ ಹೋಗಿ ಹಾಸಿಗೆಯ ಬಳಿ ನಿಂತು ನೋಡಿದೆ.

ಅಪ್ಪನ ಬಲಭಾಗವೆಲ್ಲಾ ನಿಶ್ಚಲವಾಗಿತ್ತು. ಬಲಗಣ್ಣು ಸಣ್ಣದಾಗಿತ್ತು. ಬಾಯಿ ಮತ್ತು ತುಟಿಗಳು ತಿರುಚಿಕೊಂಡಿದ್ದವು. ಬಲಗೈ ಪಕ್ಕದಲ್ಲಿ ಕೊರಡಿನಂತೆ

